# ಆಹಾ ಸುದ್ದಿ!

★ ಸಸಿತೋಟ



ಅಮೆರಿಕಾದ ಒರೆಗಾನ್ ನಿವಾಸಿ ಬ್ರೂಸ್ ಕ್ಯಾಂಪ್‌ಬೆಲ್ ನಿವೃತ್ತ ಎಂಜಿನಿಯರ್. ಆತನೇನೋ ನಿವೃತ್ತಿಗೊಂಡರೂ ಬೇರೆ ವೃತ್ತಿ ಮಾಡಬಹುದಿತ್ತು. ಆದರೆ ನಿವೃತ್ತಿಯಾದ ವಿಮಾನವೇನು ಮಾಡಬೇಕು? ಲೋಹದ ತುಣುಕಾಗುವುದನ್ನು ತಪ್ಪಿಸಲು ಸೇವೆಯಿಂದ ಮುಕ್ತಿಗೊಂಡ ಬೋಯಿಂಗ್ 727 ವಿಮಾನವನ್ನು ಕಾಡಿನೊಳಗೆ ಒಯ್ದು ವಾಸಯೋಗ್ಯ ಮನೆಯನ್ನಾಗಿ ಪರಿವರ್ತಿಸಿದ್ದಾನೆ ಕ್ಯಾಂಪ್‌ಬೆಲ್. ಅಮೆರಿಕಾದಲ್ಲಿ ವಿಮಾನ ಪುನರ್‌ಬಳಕೆ ಸಂಘವೇ ಇದೆಯಂತೆ. ಹಳೆ ಕಬ್ಬಿಣ, ಹಳೆ ಪಾತ್ರೆ.. ಎನ್ನುವುದರ ಜೊತೆ ಇನ್ನು ಮುಂದೆ ಹಳೆ ವಿಮಾನ.. ಎಂದು ಸೇರಿಸಿಕೊಳ್ಳಬಹುದು.

ಬ್ರಿಟನ್ನಿನಲ್ಲಿ ಮೊಮ್ಮಕ್ಕಳಿಗೆ ಹಣಕಾಸು ನೆರವು ನೀಡುವ ಅಜ್ಜ- ಅಜ್ಜಿಯರ ಸಂಖ್ಯೆ ಜಾಸ್ತಿಯಾಗಿದೆಯಂತೆ. ಪ್ರತಿ 6 ಮಂದಿ ಅಜ್ಜ- ಅಜ್ಜಿಯರಲ್ಲಿ ಐವರು ತಮ್ಮ ಮೊಮ್ಮಕ್ಕಳ ಪೊಕೆಟ್ ಹಣ, ಶಾಲಾ- ಕಾಲೇಜು ಶುಲ್ಕವಲ್ಲದೇ ಅವರ ಭವಿಷ್ಯದ ಯೋಜನೆಗಳಿಗೆ ಸಾಲವಾಗಿಯೂ ಹಣ ನೀಡುತ್ತಾರಂತೆ ಎನ್ನುತ್ತದೆ ಸಮೀಕ್ಷೆ. ಎಷ್ಟು ಒಳ್ಳೆಯವರು ಬ್ರಿಟನ್ನಿನ ತಾತ- ಅಜ್ಜಿಯರು. ಆದರೆ ಈ ಅಜ್ಜ- ಅಜ್ಜಿಯರ ಮಕ್ಕಳು ಅಂದರೆ ಮೊಮ್ಮಕ್ಕಳ ತಂದೆ- ತಾಯಂದಿರು ಹಣವನ್ನೆಲ್ಲ ಏನು ಮಾಡುತ್ತಾರೆ? ಸಮೀಕ್ಷೆ ಈ ಬಗ್ಗೆ ಏನನ್ನೂ ಹೇಳಿಲ್ಲ. ಆದರೆ ಅವರು ತಮ್ಮ ಮೊಮ್ಮಕ್ಕಳಿಗಾಗಿ ಹಣ ಕ್ರೋಢೀಕರಿಸುತ್ತಾರೆ ಎಂದುಕೊಳ್ಳಲು ಅಡ್ಡಿಯಿಲ್ಲ.




ಚೀನಾದಲ್ಲಿ ಇತ್ತೀಚೆಗೆ ರಾಷ್ಟ್ರೀಯ ಕಾಲೇಜು ಪ್ರವೇಶ ಪರೀಕ್ಷೆ ನಡೆಯಿತು. ಪರೀಕ್ಷೆಯಲ್ಲಿ ನಕಲು ಹೊಡೆಯಲು ಬಳಸಿದ ವಿವಿಧ ಸಾಧನಗಳನ್ನು ಪೊಲೀಸರು ವಶಪಡಿಸಿಕೊಂಡರಂತೆ. ಪುಟ್ಟ ಕ್ಯಾಮೆರಾ ಅಳವಡಿಸಿದ ಕನ್ನಡಕ, ಪೆನ್, ರಿಸೀವರ್ ಅಂಟಿಸಿದ ನಾಣ್ಯ, ರಬ್ಬರ್ ಆಕಾರದ ರಿಸೀವರ್ ಮೊದಲಾದವುಗಳು ಸೇರಿವೆಯಂತೆ. 'ಮುನ್ನಾಭಾಯ್ ಎಂಬಿಬಿಎಸ್' ನಲ್ಲಿ ಮುನ್ನಾಭಾಯ್ ಬಳಸಿದ್ದು ಬಹಳ ಹಳೆಯ ತಂತ್ರ ಅಲ್ಲವೇ!

ವಿಶ್ವಕಪ್ ಫುಟ್ಬಾಲ್ ಪಂದ್ಯಗಳಲ್ಲಿ ವಿಚಿತ್ರ ಬೆಟ್‌ಗಳು, ಹರಕೆಗಳು ಕೇಳಿ ಬರುತ್ತಿವೆ. ಚಿಲಿ ತಂಡ ಮೊದಲ ಪಂದ್ಯವನ್ನು ಗೆದ್ದರೆ ತನ್ನ ಗ್ರಾಹಕರಿಗೆ 8 ತಾಸುಗಳ ಮ್ಯಾರಥಾನ್ ಲೈಂಗಿಕ ಸುಖ ನೀಡುವುದಾಗಿ ಅಲ್ಲಿಯ ಅಶ್ಲೀಲ ಚಿತ್ರಗಳ ನಟಿ ಮಾರ್ಲೆನ್ ಘೋಷಿಸಿದ್ದಳು. ಚಿಲಿ ಗೆದ್ದಿದೆ. ಮಾರ್ಲೆನ್ ನುಡಿದಂತೆ ನಡೆದು 12 ತಾಸುಗಳವರೆಗೆ ವಿಸ್ತರಿಸಿದಳಂತೆ. ಬಹುಷಃ ಬೋನಸ್ ಪಾಯಿಂಟ್ ಇರಬಹುದು.



ಲಂಡನ್ನಿನಲ್ಲಿ ರಾಷ್ಟ್ರೀಯ ಪಿಕ್‌ನಿಕ್ ವಾರಾಚರಣೆ ನಡೆಯಿತು. ಅದರ ಅಂಗವಾಗಿ ಮೊಬೈಲ್ ಸಂಸ್ಥೆಯೊಂದು ಕಚೇರಿಯ ಹೊರಗಡೆ ಬೃಹತ್ ಗಾತ್ರದ ಪಿಕ್‌ನಿಕ್ ಟೇಬಲ್ ಹಾಕಿದೆ. ಸಂಸ್ಥೆಯ ಉದ್ಯೋಗಿಗಳು ಊಟದ ಸಮಯದಲ್ಲಿ ಹೊರಗೆ ಬಿಸಿಲಿನಲ್ಲಿ ಈ ಟೇಬಲ್ ಮೇಲೆ ಕುಳಿತು ಊಟ ಸವಿದರಾಯ್ತು. ಜೊತೆಗೆ ಟೇಬಲ್‌ನಲ್ಲಿ ತಡೆರಹಿತ 4ಜಿ ಸಂಪರ್ಕ. ಕೆಲಸದಿಂದ ತಪ್ಪಿಸಿಕೊಂಡು ಪಿಕ್‌ನಿಕ್‌ಗೆ ಓಡುವ ಉದ್ಯೋಗಿಗಳಿಗೆ ಮೂಗುದಾರ, ಜೊತೆಗೆ ಊಟ ಮಾಡುವಾಗಲೂ 4ಜಿಯಿಂದ ಮಹತ್ವದ ಇ-ಮೇಲ್ ನೋಡುವಂತೆ ಮಾಡುವ ಸಂಸ್ಥೆಯ ಉಪಾಯವಿರಬಹುದು.



ಎಕ್ಸ್ ರೇ ಕಲ್ಪನಾಶಕ್ತಿಗೆ ರೆಕ್ಕೆ- ಪುಕ್ಕ ಒದಗಿಸುತ್ತದೆ. ಜೊತೆಗೆ ಒಳಗೇನು ಅಡಗಿರಬಹುದೆಂಬ ಕುತೂಹಲ. ಬ್ರಿಟನ್ನಿನ ಕಲಾವಿದ ನಿಕ್ ಇದನ್ನೇ ಬಂಡವಾಳ ಮಾಡಿಕೊಂಡು ಬ್ಯಾಗು, ಪೊಕೆಟ್ ಕೊನೆಗೆ ಉಡುಪಿನೊಳಗೆ ಏನಿರಬಹುದೆಂದು ಎಕ್ಸ್ ರೇ ತೆಗೆದು ಅದನ್ನೇ ಕಲೆಯನ್ನಾಗಿಸಿ ಪ್ರದರ್ಶನಕ್ಕೆ ಇಟ್ಟಿದ್ದಾನಂತೆ. ಅದೂ 20 ವರ್ಷಗಳಿಂದ ತೆಗೆದ ಎಕ್ಸ್ ರೇ ಚಿತ್ರಗಳು. ಯಾರ್ಯಾರ ರಹಸ್ಯಗಳು ಪ್ರದರ್ಶನದಲ್ಲಿ ಬಹಿರಂಗವಾಗಿದೆಯೋ!